ಶ್ರೀ ಎ.ಕೆ.ಅನಂತಕೃಷ್ಣ :- ಹಸಿರು ಪಟ್ಟಿಯ ನಿಯಮಗಳ ಉಲ್ಲಂಘನೆಯನ್ನು ಮಾಡುವುದರಲ್ಲಿ ಏನಾದರೂ ಪದ್ಧತಿಯನ್ನು ಅನುಸರಿಸುತ್ತಿದ್ದೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್ :- ಉಲ್ಲಂಘನೆಯಾಗುವುದಿಲ್ಲ. ಅದನ್ನು ನಾವು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಭೂ ಬಳಕೆ ಪರಿವರ್ತನೆಯನ್ನು ಮಾಡಲಿಕ್ಕೆ. . . .

ಶ್ರೀ ಎ.ಕೆ.ಅನಂತಕೃಷ್ಣ :- ಆಗುತ್ತಿದೆಯಲ್ಲಾ ಅದಕ್ಕೆ ಏನಾದರೂ ಮಾಡುತ್ತೀರಾ? ಅದಕ್ಕೆ ಪದೇ ಪದೇ ಮಂತ್ರಿಗಳು ಉಲ್ಲಂಘನೆಯನ್ನು ಮಾಡಬಾರದೆಂದು ಹೇಳಿಕೆಯನ್ನು ಕೊಡುತ್ತಾರೆ. ಆದರೆ ಜನ ಉಲ್ಲಂಘನೆಯಾಗುತ್ತಿದೆ ಎಂದು ಹೇಳುತ್ತಿದ್ದಾರೆ. ನಡೆಯುವುದು ನಡೆಯುತ್ತಾ ಇದೆ.

ಶ್ರೀಮತಿ ಮನೋರಮಾ ಮಧ್ವರಾಜ್ :- ಇದು ಹೆಚ್.ಯು.ಡಿ. ಡಿಪಾರ್ಟ್‌ಮೆಂಟಿಗೆ ಬರುತ್ತದೆ. ಅವರು ನಮಗೆ ಕೊಡಬೇಕು. ಭೂ ಬಳಕೆಯ ಪರಿವರ್ತನೆ ಅವರು ಮಾಡಬೇಕು. ಅವರು ಮಾಡದಿದ್ದರೆ ಆಗುವುದಿಲ್ಲ.

ಶ್ರೀ ಎ.ಕೆ.ಅನಂತಕೃಷ್ಣ :- ಈ ಪ್ರಶ್ನೆಯನ್ನೇ entertain ಮಾಡಬಾರದಾಗಿತ್ತು.

ಶ್ರೀಮತಿ ದಮಯಂತಿ ಬೋರೇಗೌಡ:- ಇವರು ಆ ಜಮೀನನ್ನು ಕೇಳಿದ್ದರಿಂದ ಹೆಚ್.ಯು.ಡಿ. ಯವರು ರೆಕಮಂಡ್ ಮಾಡುತ್ತಾರೆ.

ವಿಷಯ:- ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯ ನಿರ್ಮಿಸುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 469 (2312)

ಶ್ರೀ ಕರಿಯಣ್ಣ (ಹೊಳೆಹೊನ್ನೂರು):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.?

ಅ 1991-92ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಹರಿಜನ ಗಿರಿಜನರಿಗೆ ಹಾಸ್ಟಲ್‌ಗಳನ್ನು ಮಂಜೂರು ಮಾಡಲಾಗಿದೆ ?

ಆ ಇದರಲ್ಲಿ, ಹೊಸ ಕಟ್ಟಡಗಳೆಷ್ಟು?ಮತ್ತು ಹಳೆ ಕಟ್ಟಡಗೆಳೆಷ್ಟು? ಮತ್ತು ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಎಷ್ಟು ಹೊಸ ಹಾಸ್ಟಲ್ ಕಟ್ಟಡಗಳನ್ನು 1991-92ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದೆ? (ವಿವರ ನೀಡುವುದು)

ಇ ಹಾಗಿದ್ದಲ್ಲಿ, ಹೊಸ ಕಟ್ಟಡಗಳು ಮಂಜೂರು ಆಗಿದ್ದರೆ, ಇವುಗಳು ಪೂರ್ಣಗೊಂಡಿರುವುದೇ? ಅಥವಾ ಇಲ್ಲವೇ? ಎಂಬುದನ್ನು ಅಂಕಿಅಂಶಗಳೊಂದಿಗೆ ತಿಳಿಸುವುದು?

ಬಿ.ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ ಐದು.

ಆ 1991-92ರಲ್ಲಿ ಮಂಜೂರು ಮಾಡಿರುವ ವಿದ್ಯಾರ್ಥಿನಿಲಯಗಳು ಹೊಸ ಕಟ್ಟಡದಲ್ಲಿ ಇರುವುದಿಲ್ಲ. ಮತ್ತು ಯಾವುದೇ ಫೆಟ್ರಿಕ್ ನಂತರದ ವಸತಿನಿಲಯಗಳಿಗೆ ಮಂಜೂರಾತಿ ನೀಡಿರುವುದಿಲ್ಲ.

ಇ 1991-92ರಲ್ಲಿ ಹೊಸ ಕಟ್ಟಡಕ್ಕೆ ಮಂಜೂರಾತಿ ನೀಡದೇ ಇರುವುದರಿಂದ, ಉತ್ತರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಗೆ 1992-93ನೇ ಸಾಲಿನಲ್ಲಿ ಐದು ಹೊಸ ಹಾಸ್ಟೆಲ್‌ಗಳು ಮಂಜೂರು ಆಗಿದೆಯೆಂದು ಹೇಳಿದ್ದಾರೆ. ಆ 5 ಹಾಸ್ಟೆಲ್‌ಗಳು ಯಾವ್ಯಾವ ತಾಲ್ಲೂಕುಗಳಲ್ಲಿ ಮಂಜೂರು ಆಗಿದೆ ಎನ್ನತಕ್ಕಂಥಾದ್ದನ್ನು ದಯಮಾಡಿ ಹೇಳಬೇಕು. ಹಾಗೂ 1991-92ನೇ ಸಾಲಿನಲ್ಲಿ ಎಷ್ಟು ಕಟ್ಟಡಗಳನ್ನು ಮಂಜೂರು ಮಾಡಿದ್ದೀರಿ ಎಂದು ಕೇಳಿದ್ದಕ್ಕೆ ಈ ಕಟ್ಟಡಗಳ ಮಂಜೂರಾತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದಲ್ಲಿ, 1991-92ನೇ ಸಾಲಿನಲ್ಲಿ ಹರಿಜನ, ಗಿರಿಜನ

ಮಕ್ಕಳಿಗೆ ಪ್ರೌಢಶಾಲೆಯಾಗಲಿ, ಕಾಲೇಜು ಆಗಲಿ ಅಥವಾ ಪ್ರಾಥಮಿಕ ಶಾಲೆಯಾಗಲಿ ಅಲ್ಲಿ ಇವರಿಗೆ ಕಟ್ಟಡಗಳನ್ನು ಮಂಜೂರು ಮಾಡಲಿಲ್ಲವೇ? ಹಾಗೆ ಒಂದೂ ಕಟ್ಟಡ ಸ್ಯಾಂಕ್ಷನ್ ಆಗಿಲ್ಲವೆಂದ ಮೇಲೆ ಆ ಹುಡುಗರು ಯಾವ ರೀತಿ ಬದುಕಬೇಕು ಎನ್ನತಕ್ಕಂಥಾದ್ದನ್ನು ತಿಳಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಶಿವಣ್ಣ:- ಮಾನ್ಯ ಅಧ್ಯಕ್ಷರೆ, 1991-92ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಗೆ 5 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಸಕ್ಷಮ ಪ್ರಾಧಿಕಾರ ಮಂಜೂರು ಮಾಡಿದೆ. ಈ ಪೈಕಿ 3 ವಿದ್ಯಾರ್ಥಿ ನಿಲಯಗಳನ್ನು ಈಗಾಗಲೇ ಪ್ರಾರಂಭಿಸಲಾಗಿದ್ದು ಉಳಿದ2 ವಿದ್ಯಾರ್ಥಿನಿಲಯಗಳನ್ನು 1992-93ನೇ ಸಾಲಿನಿಂದ ಪ್ರಾರಂಭಿಸಲಾಗುವುದು.

1. ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಶಕ್ತಿನಗರ, ಸೊರಬ ತಾಲ್ಲೂಕು.
2. ಸರ್ಕಾರಿ ಮೆಟ್ರಿಕ್‌ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಶಿರಾಳಕೊಪ್ಪ, ಶಿಕಾರಿಪುರ ತಾಲ್ಲೂಕು.
3. ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಭದ್ರಾವತಿ.

ಮೇಲೆ ತಿಳಿಸಿರುವ ಈ ಮೂರು ವಿದ್ಯಾರ್ಥಿ ನಿಲಯಗಳು 1991-92ನೇ ಸಾಲಿನಿಂದ ಪ್ರಾರಂಭವಾಗಿವೆ.

1. ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಜಡಿ, ಸಾಗರ ತಾಲ್ಲೂಕು
2. ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕಾರ್ಗಲ್, ಸಾಗರ ತಾಲ್ಲೂಕು.

ಈ ಪ್ರಕಾರ ಒಟ್ಟು 5 ಹಾಸ್ಟೆಲುಗಳನ್ನು 1992-93ನೇ ಸಾಲಿಗೆ ಸ್ಯಾಂಕ್ಷನ್ ಮಾಡಿದ್ದೇವೆ. ಮೂರು ಹಾಸ್ಟೆಲ್‌ಗಳನ್ನು ರೆಂಟೆಂಡ್ ಬಿಲ್ಡಿಂಗ್ಸ್‌ನಲ್ಲಿ ನಡೆಸುತ್ತಿದ್ದೇವೆ. ಯಾವುದೇ ಹೊಸ ಕಟ್ಟಡಗಳನ್ನು ನಾವು ಇನ್ನೂ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕರಿಯಣ್ಣ:- 1991-92ನೇ ಸಾಲಿನಲ್ಲಿ ಇಡೀ ರಾಜ್ಯದಲ್ಲಿ ಕಟ್ಟಡಗಳು ಮಂಜೂರಾಗಲಿಲ್ಲವೆ? ಒಂದೂ ಕಟ್ಟಡ ಮಂಜೂರಾಗಲಿಲ್ಲವೆ ? ಕಟ್ಟಡಕ್ಕಾಗಿ ಸರ್ಕಾರ ಹಣ ಕೊಡಲಿಲ್ಲವೆ ? ಎಷ್ಟು ಕಟ್ಟಡಗಳು ಮಂಜೂರಾಗಿವೆ? ಅವುಗಳಲ್ಲಿ ಶಿವಮೊಗ್ಗ ಜಿಲ್ಲೆಗೆ ಎಷ್ಟು ಕಟ್ಟಡಗಳನ್ನು ಕೊಟ್ಟಿದ್ದೀರಿ ?

ಶ್ರೀ ಬಿ.ಶಿವಣ್ಣ:- ಈಗ ನಾವು 5 ಹಾಸ್ಟಲ್ ಕಟ್ಟಡಗಳ ಸಲುವಾಗಿ ಡಿಸ್ಟ್ರಿಕ್ಟ್ ಆಫೀಸರ್ ಎಂದು ಮಾಡಿದ್ದೇವೆ. ಅಂದರೆ, ನಾವು ಸೈಟುಗಳನ್ನು ತೆಗೆದುಕೊಳ್ಳಬೇಕು. ಅನಂತರ ಕಟ್ಟಡಗಳ ಸಲುವಾಗಿ ಕೆ.ಎಂ.ಸಿ. ಯವರು ನಕ್ಷೆಗಳನ್ನು ತಯಾರಿಸಿ ಸರ್ಕಾರಕ್ಕೆ ಕಳುಹಿಸಬೇಕು.

ಶ್ರೀ ಕರಿಯಣ್ಣ:- 1991-92ನೇ ಸಾಲಿನಲ್ಲಿ ಎಷ್ಟು ಕಟ್ಟಡಗಳು ಮಂಜೂರಾಯಿತು? ಎಷ್ಟು ಕಟ್ಟಡಗಳನ್ನು ಕಟ್ಟುವುದಕ್ಕೆ ಕೊಟ್ಟಿದ್ದೀರಿ? ಆ ವಿವರಗಳನ್ನು ಹೇಳಿರಿ. ಒಂದೂ ಕಟ್ಟಡ ಮಂಜೂರಾಗಲಿಲ್ಲವೇ? ಒಂದೂ ಕಟ್ಟಡವನ್ನು ಕಟ್ಟಲಿಲ್ಲವೇ? ಹಾಗಿದ್ದಲ್ಲಿ, ಹಾಸ್ಟೆಲುಗಳಿಗೆ ಕಟ್ಟಡಗಳಿಲ್ಲವೆಂದರೆ, ಹರಿಜನ ಗಿರಿಜನರ ಮಕ್ಕಳು ಹೇಗೆ ಬದುಕುವುದಕ್ಕಾಗುತ್ತದೆ?

ಶ್ರೀ ಬಿ.ಶಿವಣ್ಣ:- ಸಾಕಷ್ಟು ಹಾಸ್ಟೆಲುಗಳನ್ನು ನಾವು ಸ್ಯಾಂಕ್ಷನ್ ಮಾಡಿದ್ದೇವೆ.

ಶ್ರೀ ಕರಿಯಣ್ಣ:-ಬಹಳ ವರ್ಷಗಳ ಹಿಂದೆಯೇ ಹಾಸ್ಟೆಲುಗಳು ಸ್ಯಾಂಕ್ಷನ್ ಆಗಿವೆ. ಪ್ರತಿ ವರ್ಷ ಕಟ್ಟದ ಉಳಿಸಿ, ಪ್ರತಿ ವರ್ಷ ಹಾಸ್ಟೆಲುಳಿಗೆ ಕಟ್ಟಡ ಕೇಳುತ್ತಿದ್ದೇವೆ. ಹೋದ ವರ್ಷ ನೀವು ಕಟ್ಟಡ ಕೊಟ್ಟಿಲ್ಲ.

ಶ್ರೀ ಬಿ.ಶಿವಣ್ಣ:- ಕಟ್ಟಡ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ, ಕಟ್ಟಡಗಳನ್ನು ಕಟ್ಟಿಸುವುದಕ್ಕೆ ನಮ್ಮ ಹತ್ತಿರ ಸಾಕಷ್ಟು ಬ್ಯಾಕ್‌ಲಾಗ್ ಇದೆ. ಹಂತ ಹಂತವಾಗಿ ನಾವು ಪ್ರೈಯಾರಿಟಿ ಬೇಸಿಸ್ ಮೇಲೆ ಕಟ್ಟಬೇಕಾಗಿದೆ.

ಶ್ರೀ ಕರಿಯಣ್ಣ:-ಹಿಂದುಳಿದ ವರ್ಗದವರಿಗೆ ಕಟ್ಟಡ ಕೊಡುತ್ತೀರಿ, ಹರಿಜನ ಗಿರಿಜನರಿಗೆ ಏತಕ್ಕೆ ಕೊಡಬಾರದು?

ಶ್ರೀ ಬಿ.ಶಿವಣ್ಣ:-ಹಾಗಲ್ಲ. ನಮ್ಮ ಬಜೆಟ್‌ಗೆ ಅನುಸಾರವಾಗಿ ನಾವು ಕಾರ್ಯಕ್ರಮಗಳನ್ನು

ಹಾಕಿಕೊಳ್ಳುತ್ತೇವೆ. ಆ ಪ್ರಕಾರ ವಸತಿ ಗೃಹಗಳ ಆಯ್ಕೆಗೆ ನಕ್ಷೆ ತಯಾರಿಸುವವರಿಗೆ ಹೇಳಿದ್ದೇವೆ.

ಶ್ರೀ ಕರಿಯಣ್ಣ:- ನಕ್ಷೆ ಏತಕ್ಕೆ? ಕಟ್ಟಡವೇ ಮಂಜೂರಾಗದಿದ್ದ ಮೇಲೆ ನಕ್ಷೆ ತಯಾರಿಸಿ ಏನು ಪ್ರಯೋಜನವಾಗುತ್ತದೆಂದು ತಾವೇ ಹೇಳಿ.

ಶ್ರೀ ಬಿ.ಶಿವಣ್ಣ:- ಸರ್ಕಾರ ಹಣ ಒದಗಿಸುವ ಪ್ರಯತ್ನ ಮಾಡುತ್ತದೆಂದು ನಾನು ಹೇಳುತ್ತಿದ್ದೇನೆ. ಈಗ ಮಾತ್ರ ನಾವು ಯಾವುದೇ ಕಟ್ಟಡಗಳನ್ನು ತೆಗೆದುಕೊಂಡಿಲ್ಲ. ರೆಂಟೆಡ್ ಬಿಲ್ಡಿಂಗ್‌ಗಳಲ್ಲಿ ನಾವು ಹಾಸ್ಟೆಲುಗಳನ್ನು ನಡೆಸುತ್ತಿದ್ದೇವೆ.

ವಿಷಯ:- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅನುದಾನಿತ ವಿದ್ಯಾರ್ಥಿನಿಲಯಗಳ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 471 (2341)

ಶ್ರೀ ಕೆ.ಸಿದ್ದಯ್ಯ:- (ಸಂತೇಮಾರನಹಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.?

ಅ ರಾಜ್ಯದಲ್ಲಿರುವ ಒಟ್ಟು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಅನುದಾನಿತ ವಿದ್ಯಾರ್ಥಿನಿಲಯಗಳೆಷ್ಟು? (ವಿವರ ನೀಡುವುದು)

ಆ ಕಳೆದ 3 ವರ್ಷಗಳಿಂದ ಪ್ರತಿಯೊಂದು ಅನುದಾನಿತ ವಿದ್ಯಾರ್ಥಿನಿಲಯದಲ್ಲಿ ಸೀಟುಗಳನ್ನು ಹೆಚ್ಚಿಸಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಇ ಕಳೆದ ವರ್ಷಗಳಿಂದ ಎಷ್ಟು ಬಾರಿಗೆ ಊಟದ ವೆಚ್ಚವನ್ನು ಹೆಚ್ಚಿಸಲಾಗಿದೆ? (ವರ್ಷ ಮತ್ತು ಹೆಚ್ಚುವರಿ ಮಾಡಿದ ಹಣದ ವಿವರ ನೀಡುವುದು)

ಈ ~~ಕಳೆದ 3 ವರ್ಷಗಳಿಂದ~~ ಎಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಅನುದಾನಿತ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದೆ? (ಪಟ್ಟಿಯನ್ನು ಲಗತ್ತಿಸಿ)

ಉ ಸರ್ಕಾರದ ವತಿಯಿಂದ ಖಾಸಗಿ ವಿದ್ಯಾರ್ಥಿನಿಲಯಗಳಿಗೆ ನಿವೇಶನಗಳನ್ನು ಸ್ವಾಧೀನಪಡಿಸಿಕೊಳ್ಳುವ, ಮಂಜೂರು ಮಾಡುವ, ಪುಕ್ಕಟೆಯಾಗಿ ಕೊಡುವ ಅಥವಾ ಕಡಿಮೆ ಬೆಲೆಯಲ್ಲಿ ವಿದ್ಯಾಭ್ಯಾಸದ ಏಳಿಗೆಗೋಸ್ಕರ ಒದಗಿಸುವ ಯೋಜನೆ ಇದೆಯೇ ?

ಶ್ರೀ ಬಿ.ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ ರಾಜ್ಯದಲ್ಲಿ 275 ಅನುದಾನಿತ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳಿವೆ. (ವಿವರ ಅನುಬಂಧದಲ್ಲಿ ಲಗತ್ತಿಸಿದೆ)

ಆ ಕಳೆದ ಮೂರು ವರ್ಷಗಳಿಂದ ಅನುದಾನಿತ ವಿದ್ಯಾರ್ಥಿ ನಿಲಯಗಳ ಸಂಖ್ಯೆಯನ್ನು ಈ ಕೆಳಕಂಡಂತೆ ಹೆಚ್ಚಿಸಲಾಗಿದೆ.

1989-90 - ಇಲ್ಲ

1990-91	1. ಹರಳಯ್ಯ ಉಚಿತ ಪ್ರಸಾದ ನಿಲಯ, ಇಂಡಿ, ಬಿಜಾಪುರ ಜಿಲ್ಲೆ.	7
	2. ಲೋಕಮಯ್ಯ ವಿದ್ಯಾರ್ಥಿ ನಿಲಯ, ಶೀಬಿ ಕ್ಷೇತ್ರ, ತುಮಕೂರು ತಾಲ್ಲೂಕು	11
1991-92	1. ಜ್ಞಾನಜ್ಯೋತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ, ಗುಲ್ಬರ್ಗಾ	8
	2. ಜ್ಞಾನಜ್ಯೋತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ, ನಿಂಬರ್ಗಾ	23